

# ಗೋಟ್ಸ್‌ಮನ್ ಅಲ್ಲ, ಗಾಡ್‌ವುಮನ್!

■ **ಪ್ರವೀಣ ಕುಲಕರ್ಣಿ**
ಕಲೆ: ಗುರು ನಾವಳ್ಳಿ

'ಈ ವರ್ಷದಿಂದ ನಿಮ್ಮ ವೈದ್ಯಕೀಯ ಶಿಕ್ಷಣ ಸಂಪೂರ್ಣ ಉಚಿತ'. ಹಣ್ಣು ಹಣ್ಣಾದ ಅಜ್ಜಿಯೊಬ್ಬರು ವೇದಿಕೆ ಮೇಲೆ ನಿಂತು ಹೀಗೆ ಪ್ರಕಟಣೆ ಹೊರಡಿಸಿದ್ದೇ ತಡ, ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ವಿದ್ಯಾರ್ಥಿಗಳು ಖುಷಿ ತಡೆಯಲಾಗದೆ ಕುರ್ಚಿಯಿಂದ ಮೇಲೆದ್ದು, 'ಹೋ' ಎಂದು ಕೂಗು ಹಾಕಿದರು. ಇದು ನಡೆದಿದ್ದು ನ್ಯೂಯಾರ್ಕ್‌ನ ಆಲ್ಬರ್ಟ್ ಐನ್‌ಸ್ಟೀನ್ (ಬ್ರಾಂಕ್ಸ್) ವೈದ್ಯಕೀಯ ಕಾಲೇಜಿನಲ್ಲಿ. ಕಾಲೇಜಿಗೆ ನೂರು ಕೋಟಿ ಡಾಲರ್ (₹ 82 ಸಾವಿರ ಕೋಟಿ) ಧಾರೆ ಎರೆದಿರುವ 93 ವರ್ಷದ ಈ ಅಜ್ಜಿ, ಜಾತಿ, ಲಿಂಗ, ಅಂತಸ್ತು ಭೇದವಿಲ್ಲದೆ ಎಲ್ಲ ಮಕ್ಕಳಿಗೂ ಉಚಿತ ವೈದ್ಯಕೀಯ ಶಿಕ್ಷಣ ನೀಡಲು ಈ ಹಣವನ್ನು ಬಳಕೆ ಮಾಡಬೇಕೆಂದು ಕಾಲೇಜಿನ ಆಡಳಿತ ಮಂಡಳಿಯನ್ನು ಕೇಳಿಕೊಂಡಿದ್ದಾರೆ. ಅಂದಹಾಗೆ, ಈ ಅಜ್ಜಿಯ ಹೆಸರು ರುತ್ ಗೋಟ್ಸ್‌ಮನ್ ಎಂದು.

ರುತ್ ಅವರು ಒಂದಾನೊಂದು ಕಾಲದಲ್ಲಿ ಐನ್‌ಸ್ಟೀನ್ ಕಾಲೇಜಿನಲ್ಲಿಯೇ ಪ್ರೊಫೆಸರ್ ಆಗಿದ್ದರು. ಅವರ ಪತಿ ಡೇವಿಡ್ ಗೋಟ್ಸ್‌ಮನ್, ಅಮೆರಿಕದ ಬಹುದೊಡ್ಡ ಹೂಡಿಕೆದಾರರಲ್ಲಿ ಒಬ್ಬರಾಗಿದ್ದರು. ಅವರಿಬ್ಬರದು ಆರು ದಶಕಗಳ ಸುದೀರ್ಘ ದಾಂಪತ್ಯ. ಡೇವಿಡ್ ಅವರು ಕೆಲವು ತಿಂಗಳುಗಳ ಹಿಂದೆ ಮರಣಶಯ್ಯೆಯಲ್ಲಿ ಮಲಗಿದ್ದಾಗ, ಪತ್ನಿಯನ್ನು ಕರೆದು, 'ಬಹುದೊಡ್ಡ ಸಂಪತ್ತನ್ನು ನಿನಗಾಗಿ ಬಿಟ್ಟು ಹೋಗುತ್ತಿರುವೆ. ಈ ಹಣವನ್ನು ನಿನ್ನ ಮನಸ್ಸಿಗೆ ತೋಚಿದಂತೆ ಖರ್ಚು ಮಾಡು' ಎಂದು ಹೇಳಿದ್ದರು. ಪತಿ ತೀರಿಹೋದ ಮೇಲೆ, ರುತ್ ಈ ಹಣವನ್ನು ಏನು ಮಾಡಬೇಕು, ಅದರ ಸದ್ಬಳಕೆ ಹೇಗಾದೀತು ಎಂದು ಯೋಚಿಸತೊಡಗಿದರು.

ಕೊನೆಗೆ ಒಂದುದಿನ ಐನ್‌ಸ್ಟೀನ್ ಕಾಲೇಜಿನ ಮುಖ್ಯಸ್ಥರಿಗೆ ಕರೆ ಮಾಡಿದ ರುತ್, ಅಲ್ಲಿನ ಮುಖ್ಯಸ್ಥ ಡಾ. ಫಿಲಿಪ್ ಓಝೂವ್ ಅವರ ಮುಂದೆ ಒಂದು ಪ್ರಶ್ನೆ ಇಟ್ಟರು. 'ನಿಮ್ಮ ಸಂಸ್ಥೆಗೆ ಒಂದು ದೊಡ್ಡ ಮೊತ್ತದ ದೇಣಿಗೆ ಬರುತ್ತದೆ ಎಂದಿಟ್ಟುಕೊಳ್ಳಿ. ಆ ದೇಣಿಗೆಯನ್ನು ಏನು ಮಾಡುತ್ತೀರಿ' ಎಂಬುದು ಅವರ ಪ್ರಶ್ನೆಯಾಗಿತ್ತು. 'ಆ ಹಣವನ್ನು ನಾವು ಮೂರು ಬಗೆಯಲ್ಲಿ ಖರ್ಚು ಮಾಡಬಹುದು. ಮೊದಲನೆಯದಾಗಿ, ವೈದ್ಯಕೀಯ ಶಿಕ್ಷಣಕ್ಕಾಗಿ ದೊಡ್ಡ ಸಾಲದ ಹೊರೆಯಿಂದ ಬಳಲುತ್ತಿರುವ ವಿದ್ಯಾರ್ಥಿಗಳ ಉಚಿತ ಶಿಕ್ಷಣಕ್ಕಾಗಿ ಅದನ್ನು ವಿನಿಯೋಗಿಸಬಹುದು. ಎರಡನೆಯದಾಗಿ...' ಎಂದು ವಿವರಿಸಲು ಹೊರಟ ಡಾ. ಓಝೂವ್ ಅವರ ಮಾತನ್ನು ಅರ್ಧಕ್ಕೆ ತುಂಡರಿಸಿದ ರುತ್, 'ನೂರು ಕೋಟಿ ಡಾಲರ್ ದೇಣಿಗೆಯನ್ನು ನಿಮ್ಮ ಸಂಸ್ಥೆಗೆ ಕೊಡುವೆ. ಮಕ್ಕಳಿಗೆ ಉಚಿತ ಶಿಕ್ಷಣದ ವ್ಯವಸ್ಥೆ ಮಾಡಿ' ಎಂದುಬಿಟ್ಟರು.

ನ್ಯೂಯಾರ್ಕ್‌ನ ಬ್ರಾಂಕ್ಸ್ ಪ್ರದೇಶದಲ್ಲಿರುವ ಈ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಸೇರುವವರಲ್ಲಿ ಹೆಚ್ಚಿನವರು ಬಡಮಕ್ಕಳು. ಅಲ್ಲದೆ, ಈ ಕಾಲೇಜಿಗೆ ಸಿಗುತ್ತಿದ್ದ ದೇಣಿಗೆ ಕೂಡ ನಗಣ್ಯವಾಗಿತ್ತು. ಅಂತಹ ಸನ್ನಿವೇಶದಲ್ಲಿ ರುತ್ ಅವರ ಹೃದಯವೈಶಾಲ್ಯ ವಿದ್ಯಾರ್ಥಿಗಳಲ್ಲಿ ಉತ್ಸಾಹ ಪುಟಿದೇಳುವಂತೆ ಮಾಡಿತು. ಅಮೆರಿಕದಲ್ಲಿ ಬಡ ವಿದ್ಯಾರ್ಥಿಯೊಬ್ಬ ವೈದ್ಯಕೀಯ ಶಿಕ್ಷಣ ಮುಗಿಸಿ ಹೊರಬರುವಷ್ಟರಲ್ಲಿ ₹1 ಕೋಟಿಯಷ್ಟು ಆತ ಸಾಲಗಾರನಾಗಿರುತ್ತಾನೆ ಎಂಬುದು ಅಂದಾಜು. ರುತ್ ಅವರ ಕೊಡುಗೆ ಕಾಲೇಜಿನ ಎಲ್ಲ ವಿದ್ಯಾರ್ಥಿಗಳನ್ನು ಸಾಲದ ಹೊರೆಯಿಂದ ಮುಕ್ತವಾಗಿಸಿದೆ. ಕಾಲೇಜಿನಲ್ಲಿ ಶೇ. 60ರಷ್ಟು ವಿದ್ಯಾರ್ಥಿನಿಯರು, ಶೇ. 29 ಏಷ್ಯನ್ನರಿದ್ದು, ಎಲ್ಲರಿಗೂ ಈ ದೇಣಿಗೆಯ ಪ್ರಯೋಜನ ತಟ್ಟಿದೆ.

'ನಿಮ್ಮ ಈ ಕೊಡುಗೆಯ ಕುರಿತು ಪತಿಗೆ ಗೊತ್ತಾಗಿದ್ದರೆ ಹೇಗೆ ಪ್ರತಿಕ್ರಿಯಿಸಿರುತ್ತಿದ್ದರು' ಎಂಬ ಪ್ರಶ್ನೆಯನ್ನು ಅವರ ಮುಂದಿಟ್ಟರೆ, 'ಅವರು ತುಂಬಾ ಖುಷಿಪಟ್ಟಿರುತ್ತಿದ್ದರು. ಹಣದ ಖರ್ಚಿನ ಸ್ವಾತಂತ್ರ್ಯವನ್ನು ನನಗೆ ನೀಡಿದ್ದರ ಕುರಿತು ಅವರಲ್ಲಿ ಲವಲೇಶದಷ್ಟೂ ಪಶ್ಚಾತ್ತಾಪ ಇರುತ್ತಿರಲಿಲ್ಲ' ಎಂದು ರುತ್ ಉತ್ತರಿಸುತ್ತಾರೆ. ಇಂತಹದ್ದೊಂದು ಕೊಡುಗೆ ನೀಡುವ ಅವಕಾಶ ಸಿಕ್ಕಿದ್ದಕ್ಕೆ ತುಂಬಾ ಖುಷಿ ಆಗುತ್ತಿದೆ ಎಂದೂ ಅವರು ಹೇಳುತ್ತಾರೆ.

ಭಾರಿ ಮೊತ್ತದ ದೇಣಿಗೆ ನೀಡಿದಾಗ, ಕಾಲೇಜಿನ ಹೆಸರಿನೊಂದಿಗೆ ದೇಣಿಗೆದಾರರ ಹೆಸರನ್ನೂ ಸೇರಿಸಿಕೊಳ್ಳುವುದು ರೂಢಿ. ಅಮೆರಿಕದಲ್ಲಿ ಹೀಗೆ ಮರುನಾಮಕರಣಗೊಂಡ ಕಾಲೇಜುಗಳು ದೊಡ್ಡ ಸಂಖ್ಯೆಯಲ್ಲಿವೆ. ಐನ್‌ಸ್ಟೀನ್ ಕಾಲೇಜಿನ ಆಡಳಿತ ಮಂಡಳಿ 'ಐನ್‌ಸ್ಟೀನ್–ಗೋಟ್ಸ್‌ಮನ್' ಕಾಲೇಜು ಎಂದು ಮರುನಾಮಕರಣ ಮಾಡಲಾಗುವುದು ಎಂಬ ಪ್ರಸ್ತಾವವನ್ನು ರುತ್ ಅವರ ಮುಂದಿಟ್ಟಿತು. 'ನಮ್ಮ ಕಾಲೇಜಿಗೆ ಐನ್‌ಸ್ಟೀನ್ ಅವರಂತಹ ದೇವರ ಹೆಸರಿದೆ. ಯಾವ ಕಾರಣಕ್ಕೂ ಕಾಲೇಜಿನ ಹೆಸರನ್ನು ಬದಲಾವಣೆ ಮಾಡಬಾರದು' ಎಂದು ಷರತ್ತು ಹಾಕಿ, ರುತ್ ಹಣವನ್ನು ಹಸ್ತಾಂತರಿಸಿದರು. 'ನನ್ನ ಕೊಡುಗೆ ಕುರಿತು ಯಾರಿಗೂ ತಿಳಿಯುವ ಅಗತ್ಯವಿಲ್ಲ. ಅದರಿಂದ ಆಗಬೇಕಾದುದು ಏನಿದೆ' ಎಂದೂ ಅವರು ಪ್ರಶ್ನಿಸಿದ್ದರು. ಹಣವುಳ್ಳ ಇತರರಿಗೆ ಪ್ರೇರಣೆಯಾಗಲಿ ಎಂಬ ಉದ್ದೇಶದಿಂದ ಈ ಕೊಡುಗೆ ಕುರಿತು ಹೇಳುತ್ತೇವೆ ಎಂದು ಆಡಳಿತ ಮಂಡಳಿ ಅವರ ಒಪ್ಪಿಗೆ ಪಡೆಯಿತು. ಬದುಕಿಗಾಗಿ ಬೇಕಾದಷ್ಟು ಹಣ, ಒಂದು ಮನೆ ಬಿಟ್ಟರೆ ಮಿಕ್ಕೆಲ್ಲವನ್ನೂ ಕಾಲೇಜಿಗೆ ಧಾರೆ ಎರೆದಿದ್ದಾರೆ ಈ ಅಜ್ಜಿ.

ತಾವು ದೇಣಿಗೆ ಕೊಟ್ಟ ಸಂಸ್ಥೆಯಿಂದ ಏನನ್ನೂ ಬಯಸದ, ಶಿಕ್ಷಣದ ಸೇವೆಗಾಗಿ ತಮ್ಮ ಇಡೀ ಆಸ್ತಿಯನ್ನು ವಿನಿಯೋಗಿಸುವಲ್ಲಿ ಸಾರ್ಥಕ್ಯವನ್ನು ಕಂಡ, ಪ್ರಚಾರದ ಹುಚ್ಚಿನಿಂದ ದೂರವಿರುವ ಮಾಗಿದ ಜೀವವಾದ ಈ ಅಜ್ಜಿಗೆ ನಮ್ಮದೂ ಒಂದು ಸೆಲ್ಯೂಟ್ ಇರಲಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65